**ಮೂರನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ., ರವರ ನ್ಯಾಯಾಲಯ, ಕನಕಪುರ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ - 35/2016**

ಪಿರ್ಯಾದುದಾರರುಃ ಸಾತನೂರು ಪೊಲೀಸರು

ವಿರುದ್ಧ

ಆರೋಪಿತರುಃ **1.** ಪವಿತ್ರ
ಕೋಂ ಮೂಗೇಗೌಡ,
ವಯಸ್ಸು 35 ವರ್ಷಗಳು,

2. ಮೂಗೇಗೌಡ
ಬಿನ್ ಲೇಟ್ ಸಿದ್ದೇಗೌಡ,
ವಯಸ್ಸು 40 ವರ್ಷಗಳು,

ಇಬ್ಬರ ವಾಸಃ
ಯಡಮಾರನಹಳ್ಳಿ ಗ್ರಾಮ,
ಉಯ್ಯಂಬಹಳ್ಳಿ ಹೋಬಳಿ,
ರಾಮನಗರ .

**ದೋಷಾರೋಪಣೆ**

ನಾನು ಶ್ರೀ ರವಿಪ್ರಕಾಶ್ ಟಿ ಆವಿನ್., ಬಿ.ಬಿ.ಎ., ಎಲ್.ಎಲ್.ಎಮ್., ಮೂರನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಕನಕಪುರ ನ್ಯಾಯಾಲಯದ ನ್ಯಾಯಾಧೀಶರಾದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಸರಹದ್ದು ಯಡಮಾರನಹಳ್ಳಿ ಗ್ರಾಮದಲ್ಲಿ ದಿನಾಂಕ.16.12.2014 ರಂದು ಬೆಳ್ಳಿಗೆ 10.30 ಗಂಟೆಯ ಸಮಯದಲ್ಲಿ, ಆರೋಪಿಗಳಾದ ನೀವು ಅಪರಾಧ ಮಾಡುವ

ಸಮಾನ ಉದ್ದೇಶದಿಂದ ಚಾಸಾ-1 ರವರು ತನ್ನ ಅಳಿಯ ಗವಿಗೌಡ ರವರ ಮನೆಯ ಮುಂದೆ ನಲ್ಲಿಯ ನೀರು ಹಿಡಿಯಲು ಹೋಗಿದ್ದು, ಚಾಸಾ-2 ಮತ್ತು ಚಾಸಾ-3 ರವರು ನೀರನ್ನು ಹಿಡಿಯುತ್ತಿದ್ದು ಚಾಸಾ-1 ರವರು ಸಹ ಅಲ್ಲಿ ಹೋಗಿ ನಿಂತಿರುವಾಗ ಆರೋಪಿಗಳಾದ ನೀವು ಚಾಸಾ-1 ರವರ ಬಳಿ ಬಂದು 2 ನೇ ಆರೋಪಿಯಾದ ನೀವು ಈ ಮನೆಯಲ್ಲಿ ಏಕೆ ಇದ್ದೀಯಾ ಮನೆ ಖಾಲಿ ಮಾಡುವ ಎಂದು ಚಾಸಾ-1 ರವರಿಗೆ ಹೇಳಿದ್ದು 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಸೂಳೆಮುಂಡೆ, ಬೆವರ್ಸಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ ಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ,ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ *1*ನೇ ಆರೋಪಿಯಾದ ನಿವು ಚಾಸಾ-*1* ರವರಿಗೆ ದೊಣ್ಣೆಯಿಂದ ಎಡ ತೋಳಿನ ಮೇಲೆ ಜೋರಾಗಿ ಹೊಡೆದು ಭಾರಿ ಗಾಯಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.326 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಕೊನೆಯದಾಗಿಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ *2*ನೇ ಆರೋಪಿಯಾದ ನೀವು ಚಾಸಾ-*1* ರವರಿಗೆ ಮನೆ ಖಾಲಿ ಮಾಡದಿದ್ದರೇ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ 1ಃ ಈ ಮೇಲೆ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?

ಆರೋಪಿ 1ಃಹೌದು

ಆರೋಪಿ2ಃಹೌದು

ಪ್ರಶ್ನೆ 2ಃ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ?

ಆರೋಪಿ 1ಃಇಲ್ಲ

ಆರೋಪಿ2ಃಇಲ್ಲ

ಪ್ರಶ್ನೆ 3 ಅಥವಾ ವಿಚಾರಣೆ ಆಗಬೇಕೋ? ಇಲ್ಲ, ವಿಚಾರಣೆಯಾಗಬೇಕು

ಆರೋಪಿ 1ಃಹೌದು

ಆರೋಪಿ2ಃಹೌದು

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ05.07.2025 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆ ಯಲ್ಲಿ ಓದಿ ಹೇಳಿ ಅವರ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

Sd/-
ಮೂರನೇ ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ., ಕನಕಪುರ.